ಶ್ರೀ ಟಿ. ಆರ್. ಪರಮೇಶ್ವರಯ್ಯ.—ಇನ್ನೂ 787 ಜನರಿಗೆ ಕಾಂಪೆನ್‌ಸೇಷನ್ ಕೊಡತಕ್ಕದ್ದು ಇದೆ ಎಂದು (c) ಉತ್ತರದಲ್ಲಿ ಹೇಳಿದೆ. ಕಾಂಪೆನ್‌ಸೇಷನ್ ಹಣ ಪಾವತಿಯಾಗದೇ ಇರುವುದಕ್ಕೆ ಕಾರಣವೇನು?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಣ ಪಾವತಿಯಾಗದೆ ಇರುವುದಕ್ಕೆ ಕಾರಣವೇನೆಂದರೆ ಒಂದೊಂದು ಮನೆಯನ್ನು ಕೆಗೆದುಕೊಂಡು ಎಷ್ಟು ಹಣ ಕೊಡಬೇಕು ಎಂಬುದನ್ನು ಸ್ಪೆಷಲ್ ಡ್ಯೂಟಿ ಆಫೀಸರ್ ಅವರು ನಿಗದಿ ಮಾಡಬೇಕಾಗುತ್ತದೆ. ಆದುದರಿಂದ ಎಲ್ಲವನ್ನೂ ಮಾಡಬೇಕಾದರೆ ಸ್ವಲ್ಪ ನಿಧಾನವಾಗುತ್ತದೆ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಎಷ್ಟು ಜಮೀನು ಮುಳುಗಡೆಯಾಗುವುದು?

ಶ್ರೀ ಎಚ್. ಕೆ. ವೀರಣ್ಣಗೌಡ.—1955-56ರಲ್ಲಿ 67.7 ಅಡಿ ನೀರು ಬಂದಾಗ 47 ಎಕರೆ ಖುಷ್ಕಿ, 211 ಎಕರೆ ತರಿ, ಒಂಭತ್ತು ಗುಂಟೆ ಬಾಗಾಯಿತು ಒಟ್ಟು ಜಮೀನು ಮುಳುಗಡೆ ಆಗಿದೆ. ಇನ್ನು 1956-57ರಲ್ಲಿ 566 ಎಕರೆ ಮತ್ತು 1957-58ರಲ್ಲಿ 2,233 ಎಕರೆ ಮುಳುಗಡೆಯಾಗುವುದೆಂದು ಅಂದಾಜಾಗಿದೆ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಎಷ್ಟು ಪರಿಹಾರ ಕೊಡಲಾಗುವುದು?

ಶ್ರೀ ಎಚ್. ಕೆ. ವೀರಣ್ಣಗೌಡ.—ಮನೆಗಳನ್ನು ಕಟ್ಟಿಸಿಕೊಳ್ಳಲು ಸೈಟನ್ನು ಕೊಡಲಾಗುವುದು. ಹಾಗು ಹಣವನ್ನೂ ಸಹ ಕೊಡಲಾಗುವುದು. ಸ್ಥಳ ಬದಲಾವಣೆ ಮಾಡಬೇಕಾಗಿರುವುದರಿಂದ ಇದರ ಬಗ್ಗೆ ಒಂದು ವಿವರವಾದ ವರದಿಯನ್ನು ಕಳಿಸಿಕೊಡಬೇಕೆಂದು ಡೆಪ್ಯುಟಿ ಕಮೀಷನರವರಿಗೆ ಕೇಳಿದೆ.

ಶ್ರೀ ಆಲೂರು ಹನುಮಂತಪ್ಪ.—ಪರಿಹಾರ ಎಷ್ಟು ಕೊಡಬೇಕು ಎಂಬುದನ್ನು ನಿಗದಿ ಮಾಡಿದ್ದೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ರೂಲ್ಸು ಪ್ರಕಾರ ಕೊಡಲಾಗುವುದು.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಯಾವ ಪರ್ಸೆಂಟೇಜ ಪ್ರಕಾರ ಎಷ್ಟು ಸ್ಯಾಚ್ಯುಟರಿ ಬೋನಸ್ಸು ಕೊಡುತ್ತೀರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ಯಾಚ್ಯುಟರಿ ಬೋನಸ್ ಯಾವುದು ನನಗೆ ಅರ್ಥವಾಗುವುದಿಲ್ಲ. ಮುಳುಗಡೆಯಾದ ಪ್ರದೇಶದಲ್ಲಿ ಪರಿಹಾರ ಕೊಡಲಾಗುವುದು. ಸ್ಪೆಷಲ್ ಆಫೀಸರ್ ಅವರು ಅವಾರ್ಡ್ ಪಾಸ್ ಮಾಡಿದ ಪ್ರಕಾರ ಯಾವ ತರದ ಜಮೀನು, ಎಂಥ ಮನೆ ಇದರ ಆಧಾರದಮೇಲೆ ಪರಿಹಾರ ಕೊಡಲಾಗುವುದು.

Dr. R. NAGAN GOWDA.—May I know how many residents of these villages have expressed their dissatisfaction at the amount that has been given? I notice that 787 people have not received any compensation.

Sri H. K. VEERANNA GOWDH.—The exact number cannot be given. A number of people have expressed dissatisfaction about the rate of award.

Dr. R. NAGAN GOWDA.—Is the award given according to the present market price or not.

Sri H. K. VEERANNA GOWDH.—The officer appointed is guided by rules and regulations. According to that, he is passing the awards. As I explained, some people have gone to the court and in certain cases, the courts have increased the award. Government have also instructed the officer to pass awards according to the rate fixed by the court.

Dr. R. NAGAN GOWDA.—Will the Officer revise the awards already granted?

Sri H. K. VEERANNA GOWDH.—He cannot do it. But Government can.

Dr. R. NAGAN GOWDA.—Wil Government do it?

Sri H. K. VEERANNA GOWDH.—Yes.

Mr. SPEAKER.—Question time is over.

QUESTIONS FOR ANSWERS ON THE DAY.

(but not taken up)

Repairs to Cauvery Bathing Ghat in Ramanathapur.

Q.—548. **Sri PUTTE GOWDA** (Arkalgud).—

Will the Government be pleased to state:—

(*a*) whether any estimate has been prepared in regard to repairs to the Cauvery Bathing Ghat in Ramanathapur in Arkalgud taluk;

(*b*) if so, the estimated expenditure thereof;

(*c*) the reasons for failure to effect repairs so far in spite of previous sanction to incur expenditure for that work;

(*d*) whether they would pass orders for repairing that Ghat immediately?

A.—**Sri M. P. PATIL** (Minister for Revenue).—

(*a*) Yes.

(*b*) The estimated expenditure is Rs. 9,945.

(*c* The estimate for Rs. 900 previously sanctioned has been subsequently revised to Rs. 9,945.

(*d*) As the funds at the credit of the temple are inadequate, the question of affecting repairs will be considered when the funds become available.